7

# ದೇವರ ಪ್ರೀತಿಯ ಸೆರೆಯಾಳುಗಳು

## (2 ಕೊರಿಂಥ 5:11-27)

*“ನಾವು ಕ್ರಿಸ್ತನ ರಾಯಭಾರಿಗಳಾಗಿದ್ದೇವೆ, ...” (5:20).*

“ಎಲ್ಲರಿಗೋಸ್ಕರ ಒಬ್ಬನು ಸತ್ತನು” (5:14) ಎಂಬ ಮಾತನ್ನು ಕೊರಿಂಥದವರು ಈ ಮೊದಲೇ ಕೇಳಿದ್ದರು. ವಾಸ್ತವವಾಗಿ, ಕೊರಿಂಥಯನ್ನರು ಯೇಸು ಕ್ರಿಸ್ತನ ಬಗೆಗೆ ಯಾವಾಗಲೂ ಕೇಳಿದಂತಹ ಮೊದಲ ಮಾತುಗಳಿಗೆ ಇವು ಸಮಾನವಾಗಿದ್ದವು (1 ಕೊರಿಂಥ 15:3). ಕೊರಿಂಥಕ್ಕೆ ಪ್ರಯಾಣಕ್ಕಾಗಿ ಎಲ್ಲೆಲ್ಲಿಗೆ ಹೋಗುತ್ತಿದ್ದನೋ ಆತನ ಸಂದೇಶದ ವಿಷಯವು ಅದೇ ಆಗಿತ್ತು, ಅದು “ಎಲ್ಲರಿಗೋಸ್ಕರ ಒಬ್ಬನು ಸತ್ತನು” ಅಥವಾ “ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು” ಎಂಬುದೇ ಆಗಿತ್ತು. ಕ್ರಿಸ್ತೀಯ ಕಥೆಯನ್ನು ಈ ಪದಗಳಲ್ಲಿ ಸರಾಂಶಿಕರಿಸಬಹುದು.

ಕೊರಿಂಥದವು ಈ ಕಥೆಯನ್ನು ಅನೇಕ ಸಮಯದ ಹಿಂದೆ ಕೇಳಿದ್ದಾದರೆ, ಪೌಲನು 5:14ರಲ್ಲಿನ ಈ ಸಮಾರೋಪಕ್ಕೆ ಮರಳುವ ವಿಚಾರವನ್ನು ಯಾಕೆ ಮಾಡಿದನು ಎಂದು ನಾವು ಕೇಳಲೇಬೇಕು. ಪೌಲನು ತನ್ನ ಕಾರ್ಯದಲ್ಲಿ ವಿರೋಧಿಗಳ ಮಧ್ಯದಲ್ಲಿ ಇರುವವನಾಗಿದ್ದನು. 2:14-7:4ರ, ಸಂಪೂರ್ಣಭಾಗವು ಪೌಲನು ನಿಜವಾದ ಕ್ರಿಸ್ತ ದಾಸನಲ್ಲ ಎಂದು ಹೇಳು ತ್ತಿರುವ ಟೀಕಾಕಾರರ ವಿರುದ್ಧ ಪೌಲನ ರಕ್ಷಣಾತ್ಮಕ ಹೊಂದಿಕೆಯೇ ಆಗಿದೆ. ನಂತರ ಒಮ್ಮಲೇ, ಪ್ರತಿಯೊಬ್ಬ ಕ್ರೈಸ್ತನು ದಾಸನಲ್ಲ ಎಂದು ಹೇಳುತ್ತಿರುವ ಟೀಕಾಕಾರರ ವಿರುದ್ಧ ಪೌಲನ ರಕ್ಷಣಾತ್ಮಕ ಹೊಂದಿಕೆಯೇ ಆಗಿದೆ. ನಂತರ ಒಮ್ಮಲೇ, ಪ್ರತಿಯೊಬ್ಬ ಕ್ರೈಸ್ತನು ಬಾಯಿಪಾಠವಾಗಿ ತಿಳಿದಿರಬೇಕೆಂದು 5:14ರಲ್ಲಿನ “ಎಲ್ಲರಿಗೋಸ್ಕರ ಒಬ್ಬನು ಸತ್ತನು” ಈ ಪದಗಳನ್ನು ಪೌಲನು ಎಸೆದಿದ್ದಾನೆ. ಆದರೆ ಆತನು ಕೊರಿಂಥಿಯನ್ನರಿಗೆ ನೆನಪಿಸುವುದನ್ನು ನಿಲ್ಲಿಸಿಬಿಡಲಿಲ್ಲ. 5:15-19ರಲ್ಲಿ ಸಂದೇಶವನ್ನು ಹೊಸ ಪದಗಳಲ್ಲಿ ಸಂಕ್ಷಿಪ್ತಕರಿಸುವುದರಲ್ಲಿ ಆತನು ಮುಂದುವರೆಯುತ್ತಾನೆ. 5:19ರಲ್ಲಿ, “ಬಹುಶಃ ಕೊರಿಂಥಿಯನ್ನರು ಈ ಪದಗಳನ್ನು ಬಾಯಿಪಾಠವಾಗಿ ಸಹ ತಿಳಿದಿದ್ದರು.” ಅವರು ಸುತ್ತುವರೆದಂಥ ಅಂಥ ಶಕ್ತಿಯನ್ನು ಸಭೆಯವರು ಕ್ರಮವಾಗಿ ಪುನರುಚ್ಚರಿಸುವುದನ್ನು ನಾವು ಊಹಿಸಿಕೊಳ್ಳೋಣ. ಕ್ರೈಸ್ತರು “ದೇವರು ಕ್ರಿಸ್ತನಲ್ಲಿದ್ದುಕೊಂಡು ಜಗತ್ತನ್ನು ತನ್ನಲ್ಲಿ ಒಂದುಗೂಡಿಸಿಕೊಂಡಿದ್ದಾನೆ” ಅಥವಾ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು ಎಂದು ತಾವು ನಂಬುವುದನ್ನು ಹೇಳುವುದನ್ನು ಸಂಕ್ಷಿಪ್ತಕರಿಸಲು ಹೇಳುತ್ತಾ ಇರುವದನ್ನು ನಾವು ಊಹಿಸಿಕೊಳ್ಳೊಣ. ಬಹುಶ 5:21ರಲ್ಲಿನ: “ನಾವು ಆತನಲ್ಲಿ ದೇವರಿಗೆ ಸಮರ್ಪಕ ರಾದ ನೀಡಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗಿ ಮಾಡಿದನು” ಎಂಬ ಪದಗಳಿಂದ ಅವರು ಉತ್ತರಿಸಬಹುದು. ನಿಜಕ್ರೈಸ್ತರು ಯಾರು ಮತ್ತು ಪೌಲನು ತನ್ನ ಭಾರವಾದ ಸ್ಫೋಟಕವನ್ನು ಯಾಕೆ ಹಿಂದಕ್ಕೆ ಎಸೆದನು ಎಂಬ ಚರ್ಚೆಯನ್ನು ಇತರರು ಬಯಸುವರು ಎಂಬ ಭಾವನೆಯನ್ನು ನಾವು ಪಡೆಯುವೆವು.

## ಹಾಗಾದರೆ ನೀವು ಉತ್ತರಿಸಬಹುದು (5:11, 12)

"ನಿಜವಾದ ಕ್ರೈಸ್ತರು ಯಾರು?" ಎಂಬ ಪ್ರಶ್ನೆಯೊಡನೆ ಹೊಂದಿರುವ ನಂಬಿಕೆಯನ್ನು ಅವುಗಳು ಹೇಗೆ ಸಂಕ್ಷಿಪ್ತಿಕರಿಸುವವು? ಕೊರಿಂಥಿಯನ್ನರು ದಿಗ್ಭ್ರಮೆಗೊಂಡರು, ಯಾಕೆಂದರೆ ಇತರರು ಕ್ರಿಸ್ತೀಯ ನಂಬಿಕೆಯೆಂದರೆ ಏನು ಎಂಬುದರ ಬಗೆಗೆ ಸ್ವಂತ ವಿಚಾರದೊಂದಿಗೆ ಬಂದಿದ್ದರು. ವಾಸ್ತವಿಚಾರದೊಂದಿಗೆ ಬಂದಿದ್ದರು. ವಾಸ್ತವವಾಗಿ, ಕ್ರಿಸ್ತನ ನಿಜ ಸೇವಕನಾಗಿರುವ ಪ್ರತಿಪಾದನೆಯನ್ನು ಮಾಡುತ್ತಿರುವ ಪ್ರತಿವಾದಿಯ ಬೇಡಿಕೆಯನ್ನು ಕೇಳಿದ ನಂತರ ಅವರು ತಾವು ನಂಬಿದನ್ನು ತಿಳಿಯುವುದನ್ನು ಅವರು ಬಿಟ್ಟುಬಿಡಲಿಲ್ಲ. ಕೆಲವರು ಇತರರೊಡನೆ "ತಮ್ಮನ್ನು ಅಳತೆಮಾಡಿ" ಕೊಂಡರು (10:12) ಮತ್ತು ಇತರರನ್ನು ಅವರ ಹೊರಗಿನ ತೋರಿಕೆಯ ಮೇಲೆ ನಿರ್ಣಯಿಸುವವರಾಗಿದ್ದರು (5:12). ಪ್ರತ್ಯಕ್ಷವಾಗಿ, ಅವರು ಆತ್ಮನ ವರವನ್ನು ಹೊಂದುವುದನ್ನು ಪ್ರತಿಪಾದಿಸಿದರು. ನಿಜ ಕ್ರಿಸ್ತನ ದಾಸನು ಶಕ್ತಿಯ ಪ್ರಕಟನೆಯ ತೋರ್ಪಡುವಿಕೆಯ ಮೂಲಕ ಗುರುತಿಸಲ್ಪಡುವನು ಎಂದು ವಾದಿಸುವವರೂ ಆಗಿದ್ದಾರೆ. ಪೌಲನಂತಹ ಭಾವನಾರಹಿತನಾದ ಮನುಷ್ಯನು ಆತ್ಮನ ಶಕ್ತಿಯನ್ನು ಹೊಂದಲು ಸಾಧ್ಯವೇ ಇಲ್ಲ, ಆದ್ದರಿಂದ ಅದನ್ನು ಪ್ರದರ್ಶಿಸಲು ಆತನಿಗೆ ಯಾವ ಅಧಿಕಾರವಿಲ್ಲ! ಒಬ್ಬ ಲೌಕಿಕ ವ್ಯಕ್ತಿ ಅಥವಾ "ಆತ್ಮಿಕತೆ ಇಲ್ಲದ ವ್ಯಕ್ತಿ" ಎಂದು ಪೌಲನ ವಿರುದ್ಧ ಅಕ್ಷೇಪಣೆಯು ಬಂದಾಗ ಆತನು ಸಮರ್ಥಿಸ್ಕೊಳ್ಳಬಹುದಿತ್ತು (1:17; 5:16; 10:3, 4).

ಪೌಲನು ತನ್ನ ಸ್ವಂತದ ಗೌರವಕ್ಕಾಗಿ ತನ್ನ ವಿರೋಧಿಗಳ ವಿರುದ್ಧ ತನ್ನನ್ನು ಸಮರ್ಥಿಸಿಕೊಳ್ಳಲಿಲ್ಲ. ಕೊರಿಂಥಿಯನ್ನರಿಗೆ ಕೆಲ ಉತ್ತರವನ್ನು ಕೊಡದಿದ್ದಾಗ ಅವರು ತಮ್ಮ ಮಾರ್ಗವನ್ನು ಸುಲಭವಾಗಿ ಕಳೆದುಕೊಳ್ಳುವರು ಎಯ ಆತನು ಕಂಡಿದ್ದನು. ಸಮಸ್ತಸಭೆಗೆ ಅರಿತುಕೊಳ್ಳುವಿಕೆಯ ಮತ್ತು ತಿಳುವಳಿಕೆ ಉಳ್ಳದ್ದಾಗಿರುವ ಅವಶ್ಯಕತೆಯು ಇತ್ತು. "... ನಾವು ಯತಾರ್ಥರೆಂದು ದೇವರಿಗೆ ಗೊತ್ತುಂಟು ಮತ್ತು ನಿಮ್ಮ ಮನಸ್ಸಿಗೆ ಕೂಡಾ ಗೊತ್ತಾಗಿದೆ ಎಂದು ನಂಬಿಕೊಂಡಿದ್ದೇನೆ" ಎಂದು ಪೌಲನು ಹೇಳುತ್ತಾನೆ (5:11). ನಂತರ ಆತನು "ನಾವು ನಮ್ಮನ್ನು ತಿರುಗಿ ನಿಮ್ಮ ಮುಂದೆ ಹೊಗಳಿಕೊಳ್ಳುವುದಿಲ್ಲ; ಆದರೆ ಹೃದಯದ ವಿಷಯದಲ್ಲಿ ಹಿಗ್ಗದೆ ತೋರಿಕೆ ವಿಷಯದಲ್ಲಿ ಮಾತ್ರ ಹಿಗ್ಗುತ್ತಾರೋ ಅವರಿಗೆ ಪ್ರತ್ಯುತ್ತರ ಹೇಳುವುದಕ್ಕೆ ನಮಗೆ ಆಧಾರವಿರಬೇಕೆಂದು ನಮ್ಮ ವಿಷಯದಲ್ಲಿ ಹಿಗ್ಗುವುದಕ್ಕೆ ನಮಗೆ ಆಸ್ಪದಕೊಡುತ್ತೇವೆ" (5:12) ಎಂದು ಸೇರಿಸುತ್ತಾನೆ. ಮಾಹಿತಿಯಿಲ್ಲದ ಸಭೆಯು ಕ್ರಿಸ್ತೀಯ ನಂಬಿಕೆಯ ವಿಧಗಳ ದಕ್ಷತೆಯ ವಿರುದ್ಧ ಸಮರ್ಥನೆ ಮಾಡಿಕೊಳ್ಳಲಾರದೇ ಹೋಗುತ್ತದೆ! ಉತ್ತರವಿಲ್ಲದೇ, ಕ್ರೈಸ್ತರ ಗುರುತು ಯಾವುದು ಎಂಬುದನ್ನು ಕ್ರೈಸ್ತರು ತಿಳಿದಿರಲಾರು.

ಸಭೆಯಲ್ಲಿ ಅಸ್ತಿತ್ವದಲ್ಲಿರುವ ಗಂಭೀರವಾದ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೋಸ್ಕರ ಪೌಲನು ಪ್ರಸ್ತಾಪಿಸಿದಂತ ಅದಕ್ಕಿಂತ ಯಾವ ಶ್ರೇಷ್ಟ ಮಾದರಿಯು ಇಲ್ಲ. ಕೊರಿಂಥ ಸಭೆಯವರು "ಎಲ್ಲರಿಗೋಸ್ಕರ ಒಬ್ಬನು ಸತ್ತನು" ಎಂಬ ಪದವನ್ನು ಅನೇಕ ಸಾರಿ ಕೇಳಿದ್ದಾಗ್ಯೂ, ಅವಶ್ಯಕವಾದ ಸಂದೇಶವನ್ನು ಕೇಳುವದು ಅವರಿಗೆ ಅವಶ್ಯವಿತ್ತು. ವಿವಾದಾತ್ಮಕ ಸಂಗತಿಗೆ ಉತ್ತರಿಸುವದಕ್ಕೋಸ್ಕರದ ಪೌಲನ ಪದ್ಧತಿಯು ನಮಗೆ ವಿಚಿತ್ರವಾಗಿ ಕಾಣಿಸಬಹುದು. ನಾವು ಕ್ರಿಯಾತ್ಮಕ ಜನರಾಗಿದ್ದೇವೆ ಮತ್ತು ನಾವು ಯಾವದು "ನಿಜ" ಎನ್ನುವುದಕ್ಕಿಂತ ಯಾವದು "ಕೆಲಸ ಮಾಡುತ್ತದೆ" ಅಥವಾಸಾಧಿಸುವ ಸಾಧನೆಯಲ್ಲಿ ನಾವು ಆಸಕ್ತಿಯುಳ್ಳವ ರಾಗಿರುತ್ತೇವೆ. ಅದಲ್ಲದೇ, ನಾವು ಹೊಸ ವಿಚಾರಗಳನ್ನು ಬಹುವಾಗಿ ಮೆಚ್ಚುವವರಾಗಿದ್ದು ಹಳೆಯ ಸಂದೇಶಗಳು ತಮ್ಮ ಶಕ್ತಿಯನ್ನು ಕಳೆದುಕೊಂಡಿವೆ ಮತ್ತು ಪುನರ್ಬಳಿಗೆ ಯೋಗ್ಯವಿಲ್ಲ ಎಂದು ಹಗುರವಾಗಿ ನಿರ್ಧರಿಸಿಬಿಡುತ್ತೇವೆ. ಅದರ ಇದು ಕ್ರೈಸ್ತನ ಗುರುತು ಏನು ಎಂಬುದನ್ನು ಪರಿಗಣಿಸುವ ಏಕಮೇವ ಮಟ್ಟವಾದ ಕಾರಣದಿಂದ ಪೌಲನು ಹಳೆಯ ಸಂದೇಶಗಳನ್ನು ಕ್ಲಿಷ್ಟಕರ ಸಂದರ್ಭಗಳಿಂದ ಹೊರತಂದನು. ಹೋರಾಟದ ನಮ್ಮ ಪ್ರಾತಿನಿಧ್ಯತೆಯು "ಎಲ್ಲರಿಗೋಸ್ಕರ ಒಬ್ಬನು ಸತ್ತನು" ಎಂಬ ಕಥೆಯೇ ಆಗಿದೆ.

ಸೇವೆಗಾಗಿ ಸ್ವಾತಂತ್ರ್ಯ ಎಂಬುದರಲ್ಲಿ ರಿಚರ್ಡ್ ನ್ಯೂಹಾಸ "ಅಮೇರಿಕದ 3000 ಮತ್ತು ಅದಕ್ಕಿಂತ ಹೆಚ್ಚು ಸ್ಥಳೀಯ ಚರ್ಚುಗಳಲ್ಲಿ, ಹೆಚ್ಚಾಗಿ ಏನಾದರೂ ಸೇವೆಯ ಎಳೆಯು ಕಾರಣಬಹುದು"[1] ಎಂದು ಬರೆಯುತ್ತಾರೆ. ಸೇವೆಯ ಎಲ್ಲಾ ವಿಭಿನ್ನ ಶೈಲಿಗಳಲ್ಲಿ, ಕೆಲವು ಕಾರ್ಯಕ್ರಮಗಳು ದೇವಜನರಿಗೆ ಯೋಗ್ಯವಾಗಿರುತ್ತವೆ ಮತ್ತು ಕೆಲವು ಯೋಗ್ಯವಾಗಿರುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಸಭೆಯ ನಾಯಕರುಗಳು ಅನೇಕ ಬದಲಿ ಕಾರ್ಯಕ್ರಮಗಳೆಡೆಗೆ ನೋಡುವಾಗ, ಯಾವದು ನಿಜವಾಗಿ ಕ್ರಿಸ್ತನಿಗಾಗಿ ಸೇವೆಮಾಡುತ್ತದೆ ಎಂಬುದನ್ನು ಹೇಗೆ ಪರಿಗಣಿಸಬಹುದು? ಕುಟುಂಬ ಜೀವಿತದ ಕಾರ್ಯಕ್ರಮಗಳನ್ನ ಒಳಗೊಳ್ಳಿಸುವುದರ, ಹೊಸ ಸೌಲಭ್ಯಗಳನ್ನು ನಿರ್ಮಿಸುವುದರ, ಅಥವಾ ತೊಂದರೆಗೀಡಾದ ಜನರಿಗೆ ಸಂತೈಸುವದನ್ನು ಪರಿಗಣಿಸುವುದಕ್ಕೆ ಮಾರ್ಗವು ಇದೆಯಾ? ಸಂಪನ್ಮೂಲಗಳಿಲ್ಲದ ಸಭೆಗೆ ಮೂಲ ಕಥೆಯಲ್ಲಿ ಯಾವ ಮಾರ್ಗದರ್ಶನವಿಲ್ಲ.

## ಈ ಕಥೆಯೇನಮ್ಮ ಕಥೆ (5:13-15)

ಕ್ರೈಸ್ತನ ಗುರುತು ಕೇವಲ ಸರಿಯಾಗಿ ಮಾತನಾಡುವ ಮಾತುಗಳಲ್ಲಿ ಮಾತ್ರಗಳಲ್ಲಷ್ಟೇ ಅಲ್ಲ, ಸರಿಯಾದ ಪದಗಳು ಅರ್ಥರಹಿ ಪದಗಚ್ಛಗಳಾಗಿರುವುದಕ್ಕೋಸಕವೂ ಅಲ್ಲ. 5:13, 14ರಲ್ಲಿ, "ಎಲ್ಲರಿಗೋಸ್ಕರ ಒಬ್ಬ ಸತ್ತನು" ಎಂದು ಪೌಲನು ತೋರಿಸಿದ ಪದಗಳು ಆತನಿಗೆ ಅರ್ಥರಹಿತವಾಗಿರಲಿಲ್ಲ. ಬಾಹ್ಯತೋರಿಕೆಯ ಮೂಲಕ ಆತನನ್ನು ಪ್ರಭಾವ ರಹಿತನು ಎಂದು ಭಾವಿಸುವವರಿಗೆಯಾಕೆ ಆತನ ಕಾರ್ಯಗಳು ಸಂತೃಪ್ತಿಗೊಳಿಸಲಿಲ್ಲ ಎಂಬುದನ್ನು ಆತನ ವಿವರಿಸಬಯಸುವಾಗ, ಆತನು "ಎಲ್ಲರಿಗೋಸ್ಕರ ಒಬ್ಬನು ಸತ್ತನು" ಎಂಬ ಪದಗಳ ಪ್ರಭಾವವನ್ನು ತನ್ನ ಜೀವನದ ಮೇಲೆ ನೆನಪಿಸಲು ಯತ್ನಿಸಿದನು. "ನಮಗೆ ಬುದ್ಧಿಪರವಶವಾಗಿದ್ದರೆ ಅದು ದೇವರ ಮಹಿಮೆಗಾಗಿಯೇ ಅದೇ; ನಮಗೆ ಸ್ವಸ್ಥಬುದ್ಧಿ ಇದ್ದರೆ ಅದು ನಿಮ್ಮ ಪ್ರಯೋಜನಕ್ಕಾಗಿಯೇ ಅದೆ" (5:13). ಎಂದು ಪೌಲನು ಹೇಳುವಲ್ಲಿ ಆತನ ಕಾರ್ಯಗಳಲ್ಲಿ ನಿರ್ಣಾಯಕವಾದಂತಹ ತತ್ವಗಳಲ್ಲಿನ ಪ್ರಭಾವವನ್ನು ನಾವು ಪಡೆದುಕೊಳ್ಳಬಹುದು. ಬಹುಶಃ ಪೌಲನು ಕೆಲಸ ಮಾಡಿದಂತಹವುಗಳಲ್ಲಿ "ಸ್ವಸ್ಥ ಮನಸ್ಸುಳ್ಳವನು" ಆಗಿರುವವನು ಎಂದು ಮತ್ತು ಸಾಕಷ್ಟು "ಆನಂದಭರಿತನಾಗಿ" ಇರುವವನಾಗಿದ್ದಾನೆ ಎಂದು ಇತರರು ಹೇಳಿದಂತೆ ಆತನು ಮೂಲ ತತ್ವಗಳನ್ನು ಸೂಚಿಸಿದ್ದಾನೆ. "ನಮಗೆ ಸ್ವಸ್ಥಬುದ್ಧಿ" ಎಂಬ ಪದಗಳು ಅಕ್ಷರಶಃ "ಅಲಂಕಾರಿಕವಾಗಿ" ಇವೆ. ನಾವು ಆನಂದಭರಿತನಾಗಿ ಇರುವುದಾದರೆ, ಈ ಆನಂದಪರವಶತೆಯು ನನ್ನ ಮತ್ತು ದೇವರ ಮಧ್ಯದಲ್ಲಿ ಇರುವುದಾಗಿದೆ. ನಾನು ನನ್ನ ಸಾಧನೆಗಳನ್ನು ನನ್ನನ್ನು ಮೀರಿ ಇತರರ ಮುಂದೆ ಪ್ರದರ್ಶಿಸಲಾರೆನು ಎಂದು ಪೌಲನು ಉತ್ತರಿಸಿದನು. ಪೌಲನು ಎಂದಿಗೂ "ಸಂಖ್ಯೆಯೆಡೆಗೆ ನೋಡುವವನು" ಆಗಿರಲಿಲ್ಲ. ಆತನ ಸೇವೆಯು "ದೇವರಿಗೋಸ್ಕರ" ಮತ್ತು "ಇತರರಿಗೋಸ್ಕರ" ಇತ್ತು. ದೇವರ ಸೇವಕನ ಗುರುತು ಆತನ ಸ್ವಾರ್ಥತೆಯ ಮತ್ತು ಅಹಂನ್ನು ತ್ಯಜಿಸುವುದೇ ಆಗಿದೆ.

ಪೌಲನ ಸಂಸ್ಕೃತಿಯ ಮತ್ತು ನಮ್ಮ ಮಟ್ಟದಲ್ಲಿ ಯಾವುದು ಆತನಿಗೆ ತಿರಸ್ಕರಿಸುವಂತೆ ಮಾಡಿತು? 5:14ರಲ್ಲಿ ಆತನು "ಕ್ರಿಸ್ತನ ಪ್ರೀತಿಯು ನಮ್ಮನ್ನು ಒತ್ತಾಯಮಾಡುತ್ತದೆ" ಎಂದು ಉತ್ತರಿಸುತ್ತಾನೆ. "ಒತ್ತಾಯಮಾಡು" (*synechei*) ಎಂಬ ಪದವು ಹೊಡೆಯುವುದಾಗಿದೆ. ಇದರ ಅರ್ಥವು "ಸ್ವಾಧೀನಕ್ಕೆ ತೆಗೆದುಕೋ" ಅಥವಾ "ತೊಲಗಿಸು" ಎಂಬುದಾಗಿದೆ. ಇದು ಪ್ರಭಾವಿಯುತ ಅಧಿಕಾರದ ಸ್ವಾಧೀನದಲ್ಲಿರುವ ಸೆರೆಯಾಳುವಿಗೆ ಉಪಯೋಗವಾಗುವ ಪದವಾಗಿದೆ. ಪೌಲನು ಕ್ರಿಸ್ತನ ಪ್ರೀತಿಯ "ಸೆರೆಯಾಳಾಗಿದ್ದುಕೊಂಡು" ಮತ್ತು "ಆತನ ಸುಪರ್ದಿಯಲ್ಲಿ ಇಡಲ್ಪಟ್ಟವನು" ಆಗಿದ್ದನು. ಆತನು ಇತರರಿಗಂತ ಭಿನ್ನವಾಗಿ ನೋಡುವವನೂ ಮತ್ತು ವರ್ತಿಸುವವನೂ ಆಗಿದ್ದನು ಯಾಕೆಂದರೆ ಆತನು ಈ ಪ್ರೀತಿಯಿಂದ ಹೊರಸೂಸುವವನಾಗಿದ್ದನು. ಆತನು ಸ್ವಾರ್ಥರಹಿತ ಪ್ರೀತಿಯಲ್ಲಿ ವರ್ತಿಸುವವನಾಗಿದ್ದನು

ಯಾಕೆಂದರೆ ಈಗ ಪ್ರೀತಿಯು ಆತನನ್ನು ನಿಯಂತ್ರಿಸುವುದಾಗಿತ್ತು.

"ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟಿದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ" (ರೋಮಾಪುರ 5:8) ಎಂದು ಪೌಲನು ಇನ್ನೊಂದೆಡೆಯಲ್ಲಿ ಹೊರಸೂಸುವ ಪ್ರೀತಿಯ ಬಗೆಗೆ ಮಾತನಾಡಿದ್ದಾನೆ. "ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು" ಎಂದು ಆತನು ಕೇಳುತ್ತಾನೆ (ರೋಮಾಪುರ 8:35). ಆತನು ಪ್ರೀತಿಯಲ್ಲಿದ್ದಾನೆ ಎಂದು ಆತನು ವೈಯಕ್ತಿಕವಾಗಿ ಕರಗಿಹೋಗಿದ್ದಾನೆ. ಆ ವಾಸ್ತವವೇ ಆತನ ಸೇವೆಯನ್ನು ರೂಪಿಸಿತು.

ತನ್ನನ್ನು ನಿಯಂತ್ರಿಸಿದ ಪ್ರೀತಿಯನ್ನು ಪೌಲನು ನೆನಪಿಸಿಕೊಳ್ಳುವಾಗ, ಆತನು ಕ್ರೂಜೆಯನ್ನು ಯೋಚಿಸಿದನು. ಈಗ ನಾವು ಯಾಕೆ ಎಂಬುದನ್ನು ಅರಿತುಕೊಳ್ಳುತ್ತೇವೆಯ. ನಿಜ ಮತ್ತು ಸುಳ್ಳು ದೇವರ ಸೇವಕ ಎಂಬ ಚರ್ಚೆಯಲ್ಲಿ "ಎಲ್ಲರಿಗೋಸ್ಕರ ಒಬ್ಬನು ಸತ್ತನು" ಎಂದು ಆತನು ಹಿಂದಿನ ಪದಗಳನ್ನೇ ಬಳಸಿದನು. ಈ ಪದಪುಂಜವು ಅರ್ಥರಹಿತವಾದ ಸವುಕಳಿಯ ಮಾತಾಗಿಲ್ಲ. ಸ್ವಕೇಂದ್ರಿಕೃತ ಮಟ್ಟವನ್ನು ಯೇಸು ಕ್ರಿಸ್ತನು ನಿರಾಕರಿಸಿದಾಗಿನ ಕ್ರೈಸ್ತತ್ವವು ಸ್ವಾರ್ಥರಹಿತ ಪ್ರೀತಿಯ ಕಾರ್ಯವೆಂದು ಪ್ರಾರಂಭಿಸಿದ ಪ್ರತಿದಿನವನ್ನು ಆತನು ನೆನಪಿಸಿಕೊಂಡನು. (1 ರೋಮಾಪುರ 15:3) ಮತ್ತು ವಿಶ್ವಾಸದ ಕೇಂದ್ರದಲ್ಲಿ "ಗೋಸ್ಕರ" (ರೋಮಾಪುರ 5:6) ಪ್ರಾಣಕೊಟ್ಟನು.

ಒಂದು ವೇಳೆ ಯೇಸು ಸ್ವಾರ್ಥಿಯಾಗಿದ್ದಾದರೆ, ಕ್ರೈಸ್ತನಾದವನ ಗುರುತು ಏನು? ಪೌಲನು "ಎಲ್ಲರಿಗೋಸ್ಕರ ಒಬ್ಬನು ಸತ್ತದ್ದರಿಂದ ಎಲ್ಲರೂ ಸತ್ತಂತ್ತಾಯಿತೆಂದು ನಿಶ್ಚಯಿಸಿಕೊಂಡವು. ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೆ ತಮಗೋಸ್ಕರ ಸತ್ತು ಎದ್ದು ಬಂದಾತನಗಾಗಿ ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು" ಎಂದು ಹೇಳು ತ್ತಾನೆ (5:14, 15). ತನ್ನ ಸ್ವಂತದ ಸಾಧನೆಯ, ಪ್ರತಿಷ್ಟೆ ಅಥವಾ ಪ್ರಸಿದ್ಧಿಯ ಜೊತೆಯಲ್ಲಿ ಇನ್ನು ಮುಂದೆ ತೊಡಗಿಸಿಕೊಳ್ಳದೇ ಇರುವುದೇ ಕ್ರೈಸ್ತನ ಗುರುತು ಆಗಿದೆ. ಯೇಸು ಕ್ರಿಸ್ತನ ಜೊತೆಯಿರುವವರು ಇತರರಿಗಾಗಿ ಜೀವಿಸುವುದಕ್ಕೆ ಇಚ್ಛೆಯನ್ನು ಹೊಂದಿರುವ ಮೂಲಕ ತಮ್ಮನ್ನು ಬೇರ್ಪಡಿಸಿಕೊಂಡಿರುತ್ತಾರೆ.

ಒಂದು ವೇಳೆ ನಾವು ಕೊರಿಂಥದವರ ಜೊತೆಗಿನ ಪೌಲನ ಸಂಭಾಷಣೆಯನ್ನು ಕೇಳಿಸಿಕೊಂಡಿದ್ದಾದರೆ, ನಾವು ನಮ್ಮ ಪ್ರಾಶಸ್ತ್ಯವನ್ನು ನಿರ್ಹರಿಸುವ ಮಾರ್ಗದ ಬಗ್ಗೆ ಹೊಸ ಪ್ರಶ್ನೆಯನ್ನು ನಾವು ಎತ್ತಬಹುದಾಗಿದೆ. ನಮ್ಮ ಮಾರ್ಗವನ್ನು ಕಂಡುಹಿಡಿಯಲು "ಎಲ್ಲರಿಗೋಸ್ಕರ ಒಬ್ಬನು ಸತ್ತನು" ಎಂಬ ಹಿಂದಿನ ಪ್ರಶ್ನೆಗೆ ಹೇಗೆ ಮರಳುತ್ತೇವೆ? ತಮಗೋ ಸ್ಕರ ಬಹುದಿನಗಳವರೆಗೆ ಜೀವಿಸದ ವಿಶೇಷಣವನ್ನು ಹೊಂದಿರುವ ನಾಯಕರನ್ನು ನಾವು ಆರಿಸಿಕೊಳ್ಳುವವರಾಗಿದ್ದೇವೆಯಾ? ಪ್ರಭಾವಶಾಲಿಯಾಗಿ ಮರೆಯುವ ಸಂಗತಿಗಳಿಂದ ಕೊರಿಂಥಿಯನ್ನರ ಹಾಗೇ ನಾವು ಕೂಡ ಆ ಶೋಧಿಸಲ್ಪಡುತ್ತೇವೆ. ಕೆಲವಕ್ಕೋಸ್ಕರ, ಅಧಿಕೃತ ಸಭೆಯ ಗುರುತು ಕಾಣಿಸುವ ಯಶಸ್ಸಾಗಿದೆ. "ನಮ್ಮನ್ನು ನಕಾಶೆಯಲ್ಲಿ ಇರಿಸುವ" ಸೇವೆಗಳನ್ನು ನಾವು ಆರಿಸಿಕೊಳ್ಳಬಹುದು. ಹೇಗೋ, ನಾವು ನಮ್ಮ ಮಾರ್ಗಗಳನ್ನು ಕಂಡುಹಿಡಿಯಲು ಯೇಸುವಿನ ಉದಾಹರಣೆಯೆಡೆಗೆ ತಿರುಗಿಕೊಳ್ಳುವುದನ್ನು ಮುಂದುವರೆಸಿದ್ದಾದರೆ, ನಾವು ಆತನ ಮಾರ್ಗದಿಂದ "ದಾಸತ್ವದಲ್ಲಿ" ಇರುವವರಾಗಿದ್ದೇವೆ. ಕ್ರಿಸ್ತನು ನಮ್ಮನ್ನು ಯಶಸ್ವಿಯುತ ವಾಗಿ ಇರಲು ಕರೆದಿಲ್ಲ ಬದಲಾಗಿ ನಂಬಿಗಸ್ತರಾಗಿ ಇರಲು ನಮ್ಮನ್ನು ಕರೆ ದಿದ್ದಾನೆ ಎಂದು ವರ್ನರ್ ಎಲ್ವರ್ ಅವರು ಸಮರ್ಥವಾಗಿ ಹೇಳಿದ್ದಾರೆ.[2]

## ದೇವರ ಹೊಸ ಜಗತ್ತು (5:16, 17)

ನಮ್ಮ ನಂಬಿಕೆಯ ಹೇಳಿಕೆಯನ್ನು ವಾರದಿಂದ ವಾರಕ್ಕೆ ತಿರುಗಿ ಮಾಡುತ್ತಲೇ ಇರು ವಾಗ ಅವುಗಳು ನಮ್ಮ ಜೀವಿತದ ಮೇಲೆ ಪ್ರಭಾವಬೀರಬಹುದೆಂಬುದನ್ನು ಗುರುತಿಸದೇ

ಇರುವ ಸಾಧ್ಯತೆಯು ಯಾವಾಗಲೂ ಇರುವುದಾಗಿದೆ. "ಅದಕ್ಕೇನು?" ಎಂದು ಕೇಳುಗನ ಧ್ವನಿಯಿಂದ ಅಡ್ಡಿಪಡಿಸಿಕೊಂಡ ಒಂದು ಸಂಜೆಯ ಆರಾಧನಾ ಸಭೆಯನ್ನು ನಾನು ನೆನಪಿಸಿಕ್ಕೊಳ್ಳುವವನಾಗಿದ್ದೇನೆ. ಆ ಪ್ರಶ್ನೆಯು, ತನ್ನ ಅಸಮಂಜಸವಾಗಿ ಇರುವಿಕೆಯ ಮೂಲಕ ಸೇವಕರನ್ನೂ ಮತ್ತು ಕೇಳುದರ ಇಬ್ಬರನ್ನೂ ಮುಜುಗರಕ್ಕೀಡುಮಾಡಿತು. ಆದರೆ "ಅದಕ್ಕೇನು?" ಎಂಬುದು ಹಿಂದಿನ ಕಥೆಗೆ ಇರುವುದಾಗಿದ್ದು, ಇದು ನಮ್ಮ ಜೀವಿತದಲ್ಲಿ ಅನೇಕ ಬದಲಾವಣೆಗಳನ್ನು ಮಾಡುವುದಾಗಿದೆ ಎಂದು ಆ ಘಟನೆಯು ನನಗೆ ನೆನಪಿಸಿತು. ನಮ್ಮ ಸೇವೆಯು ಕ್ರೂಜೆಯ ಕಥೆಯಿಂದ ಯಾವುದೇ ಪರಿಣಾಮವನ್ನು ಹೊಂದದೇ ಎಂದಿನ ಕಾಯಕದ ಜೊತೆ ಸಾಗುವದಾಗಿದೆ. ಪೌಲನ 15:16, 17ರಲ್ಲಿನ "ಅದ್ದರಿಂದ" ಎಂಬುದು "ಎಲ್ಲರಿಗೋಸ್ಕರ ಒಬ್ಬನು ಸತ್ತನು" ಎಂಬುದನ್ನು ಪುನರಾವರ್ತಿಸುವುದರ ಮೂಲಕ ಸಂತುಷ್ಟನಾಗಿಲ್ಲ. 5:16, 17ರಲ್ಲಿನ ಸಮಾನವಾದ ಎರಡು ಸಾಲುಗಳಲ್ಲಿರುವಂತೆ ಆ ಕಥೆಯು ಆತನ ಸೇವೆಯಲ್ಲಿ ವ್ಯತ್ಯಾಸವನ್ನು ಉಂಟುಮಾಡಿತು.

5:16, 17ರಲ್ಲಿ ಸಂಗತಿಯು ಮಾನವನ ಮಟ್ಟದಲ್ಲಿ ಕ್ರೂಜಿಸಲ್ಪಡುವಿಕೆಯು ಘಟನೆಯು ಹುಚ್ಚುತನ ಎಂಬದು ಜಗತ್ತಿನೆಡೆಗೆ ಸಂಪೂರ್ಣವಾಗಿ ಹೊಸ ರೀತಿಯಿಂದ ನೋಡಲು ಪೌಲನಿಗೆ ಕೊಡಲ್ಪಟ್ಟಿತ್ತು. "ಹೀಗಿರಲಾಗಿ" ಇದು ಆತನನ್ನು ಬದಲಿಸಿದ ಕ್ರಿಸ್ತನಲ್ಲಿನ ಹೊಸ ಅನುಭವವನ್ನು ಸೂಚಿಸುವುದಾಗಿದೆ. ಇನ್ನು ಮುಂದೆ ಆತನು "ಮಾನವ ರೀತಿ" ಯಿಂದಿರುವ ಯಾವುದನ್ನೂ "ಅರಿತುಕೊಳ್ಳುವುದಿಲ್ಲ" (ಅಥವಾ "ತಿಳಿಯದೇ") (*kata sarka* NEB, "ಜಾಗತಿಕ ಮಟ್ಟದಿಂದ") ಶಿಲುಬೆಯ ಎಂದರೆ ಜಾಗತಿಕ ಮಟ್ಟದ ಕೊನೆ ಎಂದಾಗಿದ್ದು, ಜಗತ್ತಿನೆಡೆಗೆ ಮತ್ತು ಯೇಸುವಿನೆಡೆಗೆ ಸಂಪೂರ್ಣವಾಗಿ ಹೊಸ ರೀತಿಯಿಂದ ನೋಡುವಿಕೆಯು ಅದರಲ್ಲಿದೆ. ಈ ಸಂಗತಿಯು 5:17ರಲ್ಲಿ ಒತ್ತಾಯ ಪೂರ್ವಕವಾಗಿ ಹೊರಬರುವುದಾಗಿದೆ. 5:17ರಲ್ಲಿನ NEB ಭಾಷಾಂತರವು ಹೀಗಿದೆ. "ಯಾರಾದರು ಕ್ರಿಸ್ತನಲ್ಲಿ ಒಂದಾಗಿದ್ದರೆ, ಅಲ್ಲಿ ಸಂಪೂರ್ಣವಾದ ಹೊಸ ಜಗತ್ತು ಇದೆ" ಇದು ನಿಜ RSVಯ ಈ ಪರಿಚ್ಛೇದದ ಅನುವಾದದಂತೆ, ಯಾವನಾದರೂ ಕ್ರಿಸ್ತನಲ್ಲಿ ಒಂದಾಗಿದ್ದರೆ ಆತನು "ಹೊಸಸೃಷ್ಟಿ" ಆಗಿದ್ದಾನೆ. ಆದರೆ ಗ್ರೀಕ ನಲ್ಲಿ ಸುಲಭವಾದ ಅನುವಾದವನ್ನು ಮಾಡುವುದಾಗಿದ್ದು ಕ್ರೈಸ್ತರು ಜಗತ್ತನ್ನು ಹೊಸದಾದ ರೀತಿಯಲ್ಲಿ ನೋಡುವುದರಿಂದಾಗಿ ಕ್ರೈಸ್ತರಿಗಾಗಿ "ಅಲ್ಲೊಂದು ಹೊಸ ಜಗತ್ತು ಇದೆ" ಎಂದಿದೆ. ಮಹತ್ವವಾದಂತಹ ಮಟ್ಟಗಳು ಪ್ರಾಧಾನ್ಯತೆಯ ವಿಷಯಗಳ ಮೇಲೆ ರಕ್ಷಿಸಿಕೊಳ್ಳದೇ ಮರಣಿಸಿದ ಮನುಷ್ಯನ ಕಥೆಯನ್ನು ಮೀರಿ ಬೆಳೆದಿದೆ. ಯಾಕೆಂದರೆ "ಹೀಗಿರಲಾಗಿ" ಆ ಕಥೆಯ ನನಗಾಗಿದ್ದು ನಾನು ದೇವರ ಮಟ್ಟದ ಪ್ರಕಾರ ಸೇವೆಯನ್ನು ಮೌಲ್ಯಮಾಪನ ಮಾಡಲೇಬೇಕು.

ಕ್ರಿಸ್ತನಲ್ಲಿಯ ಪೌಲನ ಹೊಸ "ದೃಷ್ಟಿಕೋನವು" ಇಂದು ಸಭೆಯ ಜೀವಿತದಲ್ಲಿ ವಿಮರ್ಷಾತ್ಮಕ ವಿವಾದವನ್ನು ಎಬ್ಬಿಸುವುದಾಗಿದೆ. ಅದೆ ಸಮಯದಲ್ಲಿ ಎಂಥ ಸೇವೆಯು ಪ್ರಾಧಾನ್ಯತೆಯನ್ನು ಹೊಂದಬೇಕು ಎಂದು ಪರಿಗಣಿಸುವಲ್ಲಿ ನಾವು ಅನಿಶ್ಚಿತರಾಗಿ ಉಳಿಯುವ ರಾಗಿದ್ದು, ನಮ್ಮ ಕಾರ್ಯಕ್ರಮವು ಪೌಲನ ವಿರೋಧಿಗಳ "ಮಾನವನ ದೃಷ್ಟಿಕೋನ ವನ್ನು" ಅಥವಾ ಶಿಲುಬೆಯ "ಹೊಸಜಗತ್ತನ್ನು" ಪ್ರತಿಬಿಂಬಿಸುವುದಾಗಿಯೇ ಎಂದು ನಮಗೆ ಕೇಳುವದು ಉಚಿತವಾಗಿದೆ. ಮತ್ತು ಯಶ್ವಿಯುತ ಸೇವೆಯನ್ನು ಯಾವದು ಪರಿಣಿಸುವುದಾಗಿದೆ? "ಮಾನವೀಯ ದೃಷ್ಟಿಕೋನ" ದಿಂದಾಗಿ ಅನೇಕ "ಬರಡು ಸೇವೆಗಳ" ಮೇಲೆ ಪೌಲನು "ತನ್ನ ಸಮಯವನ್ನು ಹಾಳುಮಾಡಿದನು." ನಾವು ನಮ್ಮ ಯಶಸ್ಸನ್ನು ಒಂದು ರೀತಿಯ ಸ್ಕೊರಕೀಪ ಮೂಲಕ ಅಳೆಯುವ ಹಾಗೆ ಎಲ್ಲ ಸೇವೆಗಳನ್ನು ತತ್ವಗಳ "ಸಂಖ್ಯೆಯ ಮೇಲೆ ಮೌಲ್ಯ ಮಾಪನ" ಮಾಡುವದು ಯೋಗ್ಯವಾಗಿದೆಯೋ? "ಹೊಸ ಜಗತ್ತು" ಎಂಬ ದೃಷ್ಟಿಕೋನದ ಮೂಲಕ, ಶಾಲೆಗಳಲ್ಲಿರುವಂತೆ, ಅಥವಾ ಲಾಭ ಮತ್ತು ನಷ್ಟಗಳಲ್ಲಿ ಇರುವಂತೆ ವಾಣಿಜ್ಯದಲ್ಲಿ ಇರುವ ಹಾಗೆ ಯಶಸ್ಸು ಗುಣಾತ್ಮಕ ಅಂಕಗಳಿಂದ ಎಂದಿಗೂ ಅಳೆಯಲ್ಪಡದು.

ಅನೇಕ ಮಹತ್ವದ ಕಾರ್ಯಕ್ರಮಗಳು ಹೊಸ "ದೃಷ್ಟಿ ಕೋನದಿಂದ" ದೃಢೀಕೃತಗೊಂಡವುಗಳು ಎಂದಿಗೂ ಪ್ರಚುರಗೊಳ್ಳಲಾರವು ಎಂದು ನನಗೆ ತಿಳಿದಿದೆ. ಕ್ಲಿಷ್ಟಮಯ ಪರಿಸ್ಥಿತಿಯಲ್ಲಿ ಫಲಿತಾಂಶಗಳು ಪ್ರಭಾವರಹಿತವಾಗಿರುತ್ತವೆಯೋ ಅಲ್ಲಿ ಅವುಗಳು ಹಲವು ಬಾರಿ ಹೊತ್ತು ತರುವುದಾಗಿವೆ. ಆದರೆ ಅವುಗಳು ಇತರರಿಗೋಸ್ಕರ ತಮ್ಮನ್ನು ಸಮರ್ಪಿಸಿಕೊಂಡ ಜನರಿಂದ ತರಲ್ಪಟ್ಟವುಗಳು ಆಗಿವೆ. ಗ್ರಹಿಸಲಾರದ, ತಮ್ಮ ಸಮೀಪದ ಸಭೆಯನ್ನು ಬದಲಾವಣೆಯನ್ನು ನಿರಾಕರಿಸುವ ಕ್ಷೇತ್ರಗಳಲ್ಲಿ ಮತ್ತು ಕುಟುಂಬಗಳಲ್ಲಿ ದಶಕಗಳಿಂದ ಕೆಲಸಮಾಡುತ್ತಿರುವ ಸೇವೆಗಳನ್ನು ನಾನು ನೆನಪಿಸುವವನಾಗಿದ್ದೇನೆ. ಈ ಜನರಲ್ಲಿ ಅನೇಕರು ತಮ್ಮ ಪರಿಣಾಮವನ್ನು ಪ್ರಯೋಗಿಸುವ ಪ್ರಭಾವರಹಿತ ಅಂಕಿಅಂಶವನ್ನು ಹೊಂದಿರುತ್ತಾರೆ. ಮಾನವ ಮಟ್ಟದಿಂದ ಅಳತೆಮಾಡುವವರು ವಿಫಲತೆಯನ್ನು ಇವರು ಕಾಣುವವರಾಗಿದ್ದಾರೆ. ಆದರೆ ಈ ಜನರು ಯಶಸ್ಸಿನ ಅಳತೆಯಂತೆ "ಮಾನವೀಯ ದೃಷ್ಟಿಕೋನ"ದಲ್ಲಿ ಹಿಡಿದುಕೊಳ್ಳುವುದನ್ನು ನಿರಾಕರಿಸುವವರಾಗಿದ್ದಾರೆ.

## ಇದು ಯಾರ ಸೇವೆಯಾಗಿದೆ? (5:18-21)

ನಮ್ಮ ಸ್ವಾಭಾವಿಕ ಅಹಂಭಾವನೆಯು "ಮಾನವೀಯ ದೃಷ್ಟಿಕೋನದ" ಮೂಲಕ ಜೀವಿಸುವ ಹಾಗೆ ನಮ್ಮ ಪ್ರಚೋದಿಸುವುದಾಗಿದೆ. ನಮ್ಮನ್ನು ಪ್ರಗತಿಯಲ್ಲಿ ನಡೆಸುವ ಮತ್ತು ಸಾಧನೆಯಲ್ಲಿ ಹೆಮ್ಮೆಪಡುವುದಕ್ಕೆ ಕಾರಣವನ್ನು ಕೊಡುವಂತಹ ಕಾರ್ಯಕ್ರಮಗಳನ್ನು ನೋಡುವ ನಾವು ಪ್ರಚೋಧನೆಗೆ ಒಳಗಾಗುತ್ತೇವೆ. ಯಶಸ್ಸಿಗೆ ಸಂಭವನೀಯ ಶ್ರೇಷ್ಟಯಿರದ ನ್ಯಾಯಬದ್ಧವಾದ ಸೇವೆಗಳನ್ನು ನಿರ್ಲಕ್ಷಿಸಲು ಸಹ ನಾವು ಪ್ರೇರಿಸಲ್ಪಡುತ್ತೇವೆ. "ಅತಿಶ್ರೇಷ್ಟ" ಚರ್ಚನ್ನು ಹೊಂದುವ ಅಥವಾ "ಬಲು ಪ್ರಭಾವಯುತ" ಚರ್ಚಿನ ಸೇವಕರಾಗುವ ಇಚ್ಚೆಯಿರು ವಾಗ ಪಂಥಕಟ್ಟುವಲ್ಲಿ ಸ್ವಾಭಾವಿಕ ಅಹಂ ಇರುವುದಾಗಿದೆ. ವಿಶೇಷವಾಗಿ ನಾವು ನಮ್ಮ ಸ್ವಯಂ ಅಹಂಕಾರದಿಂದ ಹಿಡಿದಿರುವಾಗ, ಇದು ಯಾರ ಸೇವೆ? ಎಂಬ ಪ್ರಶ್ನೆ ಎತ್ತುವುದಕ್ಕೆ ಸಮಯವಿರುವದು.

ಪೌಲನು 5:18, 19ರಲ್ಲಿ ಈ ಪ್ರಶ್ನೆಗೆ ಉತ್ತರಿಸುವವನಾಗಿದ್ದಾನೆ. "ಇದೆಲ್ಲ ದೇವರಿಂದಲೇ ಆದದ್ದು" ಎಂಬ ಸತ್ಯಾಂಶದ ಮೇಲೆ ಇದು ಒತ್ತಿಹೇಳುವುದಾಗಿದೆ. ವಚನ 18 ಮತ್ತು 19ರಲ್ಲಿ, ಆತನು ಕ್ರಿಸ್ತೀಯ ಕಥೆಯನ್ನು 5:14ರಲ್ಲಿ ಆತನು ಮಾಡಿದ ಹಾಗೆ ಅದು, "ದೇವರಿಂದ" ಎಂಬುದನ್ನು ನೆನಪಿಸುವ ನಿಟ್ಟಿನಲ್ಲಿ ಸಾರಾಂಶೀಕಿಸಿದ್ದಾನೆ. ಕ್ರಿಸ್ತನ ಮೂಲಕ (5:18) ಮತ್ತು ಕ್ರಿಸ್ತನಲ್ಲಿ (5:19). "ನಮ್ಮನ್ನು ತನಗೆ ಸಮಾಧಾನಪಡಿಸಿಕೊಂಡನು" ಎಂದು ಆತನು ಎರಡು ಸಮಾನವಾದ ಸಾಲುಗಳಲ್ಲಿ ಹೇಳುತ್ತಾನೆ. ಅದು, ದೇವರ ಮೂಲದೊಡನೆ ಕತೆಯು ಪ್ರಾರಂಭವಾಗುತ್ತದೆ. ಆತನಲ್ಲಿ ನಮ್ಮನ್ನು ನಾವು ನವೀಕರಿಸುವುದಕ್ಕೆ ಏನನ್ನೂ ಮಾಡುತ್ತಿಲ್ಲ.

ಪೌಲನು ಶಿಲುಬೆಯ ಕಥೆಯನ್ನು ಹೇಳಿದಾಗ, ಪೌಲನು ಕ್ವಚಿತ್ತಾಗಿ ಉಪಯೋಗಿಸುವ ದೃಷ್ಟಾಂತದಲ್ಲಿ ಮನದ ಮೇಲೆ ಅಚ್ಚೊತ್ತುವ ದೃಷ್ಟಾಂತವನ್ನು ಆತನು ಬಳಸಿ ದೇವರು ಏನನ್ನು ಮಾಡಿದನು ಎಂದು ಘೋಷಿಸಿದನು. ಕ್ರೂಜೆಯಲ್ಲಿ ದೇವರು ನಮ್ಮನ್ನು ತನಾಗಿ "ಸಮಾಧಾನಪಡಿಸಿದನು" ಈ ಪದವು ಬೇರ್ಪಡುವಿಕೆಯ ಅವಧಿಯ ನಂತರದ ಶಾಂತಿ ಮತ್ತು ಸೌಹರ್ದತೆಯ ಪುನತುಂಬುವಿಕೆಯನ್ನು ಸೂಚಿಸುವುದಾಗಿದೆ (ಹೋಲಿಸಿ 1 ಕೊರಿಂಥ 7:11). ಇಬ್ರಿಯರು ಸಾಮಾನ್ಯವಾಗಿ ಓಣಿಗಳಲ್ಲಿ ವಂದನೆಯನ್ನು ಕೊಡುವಂತಹ *ಶಾಲೋಮ* ಎಂದು ವದಿಸುವುದನ್ನು ಆ ಪದವು ನಮಗೆ ನೆನಪಿಸುವುದಾಗಿದೆ. ಆ ಪದದ ಅರ್ಥವು "ಶಾಂತಿ" ಎಂದಾಗಿದೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ವೈಶಮ್ಯದ ಅನುಪಸ್ಥಿತಿಯಲ್ಲ ಎಂಬ ಅರ್ಥವನ್ನು ಕೊಡುವುದಾಗಿದೆ. ಇದು ಸೌಹಾರ್ಧತೆಯ ಮತ್ತು ಸಂಪೂರ್ಣತೆಯ ಅನುಭವವನ್ನು ಸೂಚಿಸುವುದಾಗಿದೆ. ನಮ್ಮ ಮೂಲದವರು ಏನು ಮಾಡಿದರೋ ಅದನ್ನು ಮಾಡಬಾರದೆಂದು ದೇವರು ಯೇಸುವಿನ ಮೂಲಕ ವರ್ತಿಸಿ ಅದನ್ನು ಮಾಡಿದನು: ಆತನು ಶಾಲೋಮನ್ನು ಪುನ

ಸ್ಥಾಪಿಸಿದನು. ರೋಮಾಪುರ 5:1 ರಲ್ಲಿ ಪೌಲನು ಹೇಳುವಂತೆ, "ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ" (ರೋಮಾಪುರ 5:10). ವೈರಿಗಳಾಗಿದ್ದ ನಂತರ ನಾವು "ಆತನ ಮಗನ ಮೂಲಕ ಆತನೊಂದಿಗೆ ಸಮಾಧಾನವಾಗಿರುತ್ತೇವೆ" ಇದು ಈ ಮೊದಲೇ ಹೇಳಿದ (5:14): "ಎಲ್ಲರಿಗೋಸ್ಕರ ಒಬ್ಬನು ಸತ್ತನು" ಎಂಬುದರ ವಿಭಿನ್ನ ರೀತಿಯಾಗಿದೆ. ಇದು ದೇವರ ಕಥೆಯೇ ಹೊರತು ನಮ್ಮದಲ್ಲ.

ಆದರೆ ಇತರರು ಈ ಕಥೆಯನ್ನು ಹೇಗೆ ತಿಳಿಯುವರು? 5:18-20ರಲ್ಲಿ, ಪ್ರತಿ ಸಮಯದಲ್ಲಿ ಪೌಲನು ಕಥೆಯನ್ನ ("ದೇವರು ನಮ್ಮನ್ನು ಸಮಾಧಾನಪಡಿಸುವವನಾಗಿದ್ದಾನೆ") ಸಾರಾಂಶೀಕರಿಸುವವನಾಗಿದ್ದಾನೆ, ದೇವರು ಕಥೆಯನ್ನು ಯಾರಿಗೆ ಒಪ್ಪಿಸುವವನಾಗಿದ್ದಾನೆ ಎಂದು ಸಹ ಆತನು ಸೂಚಿಸುವವನಾಗಿದ್ದಾನೆ. ದೇವರು ನಮ್ಮನ್ನು ಸಮಾಧಾನಪಡಿಸಿದ್ದೇ ಆದರೆ, ನಾವು "ಸಮಾಧಾನಪಡಿಸುವ ಸೇವೆಯನ್ನು" ತೆಗೆದುಕೊಳ್ಳಬೇಕು (5:18). 5:18ರ ಪ್ರಕಾರ ನಮ್ಮ ಸೇವೆಯು, ಒಂದು ವರವಾಗಿದೆ ("ಸಮಾಧಾನಪಡಿಸುವ ಸೇವೆಯನ್ನು ಕೊಡುವಂತಹದ್ದಾಗಿದೆ"). 5:19ರ ಪ್ರಕಾರ, ಇದು ಒಂದು "ವಿಶ್ವಾಸವಾಗಿದೆ." ಇದು ನಾವು ಬಯಸಿದಂತೆ ಮಾಡುವಂತಹ ನಮ್ಮ ಸೇವೆಯು ಇದಲ್ಲ. ಕಾರ್ಯಕ್ರಮಗಳು ನಮ್ಮ ಕಾರ್ಯಕ್ರಮಗಳಲ್ಲ. ನ್ಯಾಯಬದ್ಧವಾದ ಕಾರ್ಯಕ್ರಮಗಳು ಎಂದಿಗೂ ತಂತಮ್ಮಲ್ಲಿ ಸ್ಪರ್ಧಿಸಲಾರವು. ವಾಸ್ತವವಾಗಿ, ಪ್ರತಿಯೊಂದು ಯೋಗ್ಯ ಸೇವೆಗಳು "ಸಮಾಧಾನಪಡಿಸುವ ಸೇವೆಯನ್ನು" ಉದ್ದೇಶಿಸಿ ಇರುವವುಗಳು ಆಗಿವೆ.

ಅಧುನಿಕ ಸೇವೆಗಳು ಹಲವುಬಾರಿ ವಿಫಲವಾಗುತ್ತವೆ ಕಾರಣ ಮಾರ್ಗದರ್ಶನ ಮತ್ತು ವ್ಯಾಖ್ಯೆಯ ಕೊರತೆಯಿಂದಲೇ, ಪೌಲನು ಅಂಥ ಮಾರ್ಗದರ್ಶನದಿಂದ ಕೊರತೆಯುಳ್ಳವನಾಗಿರಲಿಲ್ಲ. "ಸಮಾಧಾನ ಪಡಿಸುವ ಸೇವೆಯಂತ" ಆತನ ಸೇವೆಯು ವ್ಯಾಖೆಯಿಂದ ಯಾವ ಕೊರತೆಯನ್ನೂ ಹೊಂದಿರಲಿಲ್ಲ. ಸೇವೆಯ ಪ್ರತಿಯೊಂದು ಕಾರ್ಯಗಳು ಮತ್ತು ಪ್ರತಿಯೊಂದು ಗುರಿಗಳೂ ದೇವರು ಮತ್ತು ಮನುಷ್ಯರ ಮಧ್ಯ *ಶಾಲೋಮನ್ನು*, ಸಮಧಾನವನ್ನೂ ತರುವಂತವುಗಳು ಆಗಿದ್ದವು. ಆತನು ಕ್ರಿಸ್ತನ "ರಾಯಭಾರಿಯಾಗಿದ್ದನು" (5:20). "ರಾಯಭಾರಿ" ಎಂಬ ಪದವು ಗಂಭೀರಯುತಪದವಾಗಿದ್ದು ಸೇವೆಯ ಇತರ ಪದಗಳಂತೆ ಅಲ್ಲ (ಉದಾಹರಣೆ "ಗುಲಾಮ," 4:5; "ದಾಸ," 6:4). ಪೌಲನ ದಿನಗಳಲ್ಲಿ, ನಮ್ಮಷ್ಟಕ್ಕೆ ನಾವೇ, ರಾಯಭಾರಿಯು ತನ್ನ ನಾಯಕನಿಗೋಸ್ಕರ ಪೂರ್ಣವಾಗಿ ಮಾನಾಡುವ ಹಕ್ಕನ್ನು ಹೊಂದಿದ್ದನು ಆತನ ಮಾತನಾಡುವವರು ತಿಳಿದಿರಬೇಕಿತ್ತು. ಆತನು ಶಾಂತಿಗಾಗಿ ಕೆಲಸಮಾಡುವಾಗ, ಆತ ಹಿಂದೆ ಚಕ್ರವರ್ತಿಯ ಅಧಿಕಾರಿಗಳು ನಿಂತಿರುತ್ತಿದ್ದರು. ಹೀಗೆ ಪೌಲನು ದೇವ "ಶಾಂತಿಯ," ಅಂಶವನ್ನು ಇತರರಿಗೆ ನಿವೇದಿಸುವಾಗ ಇದು ಸೇವಕನ ಮೂಲಕ ದೇವರು ನಿವೇದಿಸುವುದಾಗಿತ್ತು.

## ಮುಕ್ತಾಯ

ಇಂದು ನಾವು ಕೇಳಬಹುದಾದ ಸಭೆಯ ಸೇವೆಯ ಬಗೆಗೆ ಚರ್ಚಿಸಿದಂತಹುಗಳ ಮೇಲೆ ಬೆಳಕುಚಲ್ಲುವಾಗ, ಪೌಲನ ಪದಗಳು ಆ ಸಮಯದಲ್ಲಿ ಮಾತನಾಡಲ್ಪಟ್ಟವು. ಮಾರ್ಗದರ್ಶನಕ್ಕಾಗಿ ಮತ್ತು ನಮ್ಮ ಕಾರ್ಯಕ್ರಮದ ಉದ್ದೇಶಕ್ಕಾಗಿ ನಾವು ನೋಡುವಾಗ, ನಾವು ಆತನ ಸೇವಕರನ್ನು ಸಂತೈಸಿದ ದೇವರ "ಸಮಾಧಾನ ಪಡಿಸುವ ಪದಗಳನ್ನು" ಅವಶ್ಯಕವಾದ ಸತ್ಯಾಂಶವನ್ನು ನಾವು ಅಲಕ್ಷಿಸುವ ಧೈರ್ಯವನ್ನು ಮಾಡೆವು. "ದೇವರಿಂದ ಸಮಾಧಾನಪಡಿಸಲ್ಪಡುವದು" ಎಂದು ಇರುವಂತಹ ಇತರರಿಗೆ ಹೇಳುವುದನ್ನು ಅದು ಮರೆತಾಗ ಚರ್ಚ್ ತನ್ನ ಮಾರ್ಗವನ್ನು ಕಳೆದುಕೊಂಡಿರುವಂತದ್ದಾಗಿದೆ. ಒಂದು "ನಿಜ ಸಭೆಯು" ಪುನರಾವರ್ತಿತವಾಗಿ ಸರಳವಾದ ಕಥೆಯ ಅವಳ ಜೀವಿತ ಎಂದು ಕರೆಯಲ್ಪಡುವ ಕಥೆಗೆ ತಿರುಗಿಕೊಳ್ಳವುದಾಗಿದೆ: "ಒಬ್ಬನು ಎಲ್ಲರಿಗೋಸ್ಕರ ಸತ್ತದ್ದರಿಂದ ಎಲ್ಲರೂ

ಸತ್ತಂತ್ತಾಯಿತು." ಒಂದು ವೇಳೆ, "ಮಾನವೀಯ ದೃಷ್ಟಿಕೋನದಿಂದ" ಮಾತ್ರ ಎಂದು ನಾವು ಮಾತನಾಡಿದ್ದಾಗಲೀ ನಡೆದುಕೊಂಡಿದ್ದಾಗಲೀ ಇದ್ದದ್ದಾದರೆ, ನಮ್ಮ ಇರುವಿಕೆಯ ಅಸ್ತಿತ್ವವನ್ನು ಕಳೆದುಕೊಳ್ಳುತ್ತೇವೆ. ವಾಸ್ತವವಾಗಿ, "ಮಾನವೀಯ ದೃಷ್ಟಿಕೋನದಿಂದ" ನಾವು ಯಶಸ್ಸನ್ನು ಹೊಂದಿರುತ್ತೇವೆ ಮತ್ತು ನಮ್ಮ ಮಾರ್ಗವನ್ನು ಕಳೆದುಕೊಳ್ಳುತ್ತೇವೆ. ಪ್ರತಿಯೊಂದು ಪೀಳಿಗೆಗೂ ಕೇಳಲಿರುವ ಅವಸರದ ಕೂಗು ಒಂದಿದೆ ಅದು ನಮ್ಮ ಸೇವೆಯು ದೇವರ "ಹೊಸ ಜಗತ್ತಿನ" ಮೌಲ್ಯವನ್ನು ಪ್ರತಿಬಿಂಬಿಸುವುದಾಗಿದೆಯಾ?

---

ಟಿಪ್ಪಣಿಗಳು

[1]Richard John Neuhaus, *Freedom for Ministry* (New York: Harper, 1979), 35.

[2]Verner Eller, *Outward Bound* (Grand Rapids, Mich.: Wm. B. Eerdmans, 1930), 47.